**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.**

ಸಂಖ್ಯೆ: ಕಪಂರಾಆ/ಅಭಿವೃದ್ಧಿ/438/2022 ದಿನಾಂಕ:22.09.2022

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ **"ಓದುವ ಬೆಳಕು"** ಕಾರ್ಯಕ್ರಮದ ಅಂಗವಾಗಿ **'ಅಮ್ಮನಿಗಾಗಿ ಒಂದು ಪುಸ್ತಕ ಅಭಿಯಾನ'** ಮತ್ತು **'ಪತ್ರ ಬರೆಯುವ ಅಭಿಯಾನ'** ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು.

***

ತಮಗೆ ತಿಳಿದಿರುವಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮಕ್ಕಳನ್ನು ಓದುವುದು ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು **"ಓದುವ ಬೆಳಕು"** ಕಾರ್ಯಕ್ರಮವನ್ನು ಆರಂಭಿಸಿದೆ. ಸದರಿ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು, ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಗುರಿಯನ್ನು ಹೊಂದಲಾಗಿದೆ, ಗ್ರಂಥಾಲಯಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಈ ವರ್ಷವೂ,"**ಓದುವ ಬೆಳಕು**" ಕಾರ್ಯಕ್ರಮದ ಅಡಿಯಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ **'ಗ್ರಾಮ ಚದುರಂಗ(Chess) ಆಟ ಆಡೋಣ ಅಭಿಯಾನ'** ಮತ್ತು **'ಗಟ್ಟಿ ಓದು ಅಭಿಯಾನ'** ಗಳನ್ನು ಸಮರ್ಪಕವಾಗಿ ಆಯೋಜಿಸಲಾಗಿದ್ದು, ಗ್ರಂಥಾಲಯಗಳ ಮೂಲಕ ಮಕ್ಕಳು ನಿರಂತರವಾಗಿ ಅನೇಕ ಬಗೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸುವ ಅವಶ್ಯಕತೆ ಇದೆ. ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ಮಕ್ಕಳು ನಿಯಮಿತವಾಗಿ ಬರೆಯುವ ಅಭ್ಯಾಸವನ್ನು ಮಾಡಲು ಅವಕಾಶ ಕಲ್ಪಿಸುವುದು ಮತ್ತು ಪ್ರೋತ್ಸಾಹಿಸುವುದು ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ವಿಶೇಶವಾಗಿ, 2ನೇ ಅಕ್ಟೋಬರ್ 2022 ರಂದು **ಗಾಂಧಿ ಜಯಂತಿ**ಯ ಅಂಗವಾಗಿ ದಿನಾಂಕ:02.10.2022 ರಿಂದ 12.10.2022 ರವರೆಗೆ 10 ದಿನಗಳ ಕಾಲ **"ಅಮ್ಮನಿಗಾಗಿ ಒಂದು ಪುಸ್ತಕ"** ಚಟುವಟಿಕೆಯನ್ನು ಪ್ರತಿ ಗ್ರಾಮ ಪಂಚಾಯತಿಯ ಗ್ರಂಥಾಲಯಗಳಲ್ಲಿ ಆಯೋಜಿಸುವುದು. ಹಾಗೆಯೇ, 14ನೇ ನವೆಂಬರ್ 2022ರಂದು **ಮಕ್ಕಳ ದಿನಾಚರಣೆ**ಯ ಅಂಗವಾಗಿ ದಿನಾಂಕ:14.11.2022 ರಿಂದ 24.11.2022ರ ವರೆಗೆ 10 ದಿನಗಳ ಕಾಲ **"ಪತ್ರ ಬರೆಯುವ ಅಭಿಯಾನ"** ಚಟುವಟಿಕೆಯನ್ನು ಪ್ರತಿ ಗ್ರಾಮ ಪಂಚಾಯತಿಯ ಗ್ರಂಥಾಲಯಗಳಲ್ಲಿ ಆಯೋಜಿಸುವುದು.

**ಈ ಚಟುವಟಿಕೆಗಳ ಉದ್ದೇಶ:**

**"ಅಮ್ಮನಿಗಾಗಿ ಒಂದು ಪುಸ್ತಕ ಅಭಿಯಾನ"**

- ಮಗು (6 ವರ್ಷಗಳ ಒಳಗೆ) ಗ್ರಂಥಾಲಯದಿಂದ ಒಂದು ಪುಸ್ತಕ ಪಡೆದುಕೊಂಡು ಮನೆಯಲ್ಲಿ ತಾಯಿಗೆ ಕೊಟ್ಟು, ಓದಿಸಿ, ತಾಯಿ ಅದನ್ನು ಮಗುವಿಗೆ ಮನನ ಮಾಡಿಸುವುದು.
- ವಾರದಲ್ಲಿ ಒಂದು ದಿನ ಓದಿದ್ದನ್ನು ಸೃಜನಶೀಲತೆಯಿಂದ ಬರೆದು ಅಮ್ಮನಿಗೆ ಒಪ್ಪಿಸುವುದು, ನಂತರ ಗ್ರಂಥಾಲಯಕ್ಕೆ ನೀಡುವುದು.

- ಮಕ್ಕಳು ಗ್ರಂಥಾಲಯಕ್ಕೆ ಬಂದು ಅಮ್ಮನಿಗಾಗಿ ಪುಸ್ತಕವನ್ನು ಆಯ್ದು ಅದನ್ನು ಮನೆಗೆ ತೆಗೆದುಕೊಂಡು ಹೋಗಿ, ತಾಯಿಗೆ ಆ ಪುಸ್ತಕವನ್ನು ಕೊಟ್ಟು, ಓದಿಸಿ ಓದಿ ಮಕ್ಕಳಿಗೆ ವಿಷಯವನ್ನು ಹೇಳುವುದು.
- ಓದು ಬರದಿರುವ ತಾಯಂದಿರ ಮಕ್ಕಳು ಗ್ರಂಥಾಲಯದಿಂದ ಅಮ್ಮನಿಗಾಗಿ ಒಂದು ಪುಸ್ತಕವನ್ನು ಆಯ್ದು ಅದನ್ನು ಮನೆಗೆ ತೆಗೆದುಕೊಂಡು ಹೋಗಿ ತಾಯಿಯ ಜೊತೆ ಆ ಪುಸ್ತಕವನ್ನು ಓದುವುದು.
- ಮಕ್ಕಳು ಅಮ್ಮನಿಗಾಗಿ ಆಯ್ದ ಪುಸ್ತಕವನ್ನು ಅಮ್ಮ ಮತ್ತು ಮಗು ಒಟ್ಟಿಗೆ ಓದುವುದರಿಂದ ಮಕ್ಕಳಿಗೆ ಓದಲು ಆಸಕ್ತಿ ಹೆಚ್ಚುತದೆ ಹಾಗೆಯೇ ತಾಯಂದಿರಿಗೆ ಮಕ್ಕಳ ಓದಿನ ಪ್ರಗತಿಯ ಬಗ್ಗೆ ತಿಳಿಯುತ್ತದೆ.
- ಈ ಅಭಿಯಾನದಿಂದ ತಾಯಿ ಮತ್ತು ಮಕ್ಕಳ ನಡುವೆ ಯಾವುದೇ ವಿಚಾರಗಳನ್ನು ಮುಕ್ತವಾಗಿ ಚರ್ಚಿಸುವುದಕ್ಕೆ ಬೇಕಾದ ತಾಯಿ ಮತ್ತು ಮಕ್ಕಳ ನಡುವಿನ ಒಡನಾಟ/ಬಾಂಧವ್ಯ ಹೆಚ್ಚುತ್ತದೆ.
- ಮಕ್ಕಳ ಮೂಲಕ ಓದು ಬರದಿರುವ ತಾಯಂದಿರು ಅಕ್ಷರತೆಯ ಬಗ್ಗೆ ಆಸಕ್ತಿ ಹೊಂದಿ ಅವರ ಸಬಲೀಕರಣವಾಗಲು ಸಾಧ್ಯವಾಗುತ್ತದೆ.

**"ಪತ್ರ ಬರೆಯುವ ಅಭಿಯಾನ"**

- ಮಕ್ಕಳಿಗೆ ಓದುವುದರ ಜೊತೆಗೆ ಬರೆಯುವ ಅಭ್ಯಾಸವನ್ನು ಮಾಡಲು ಅವಕಾಶ ಕಲ್ಪಿಸುವುದು.
- ಮಕ್ಕಳಲ್ಲಿ ಮೌಖಿಕ ಮತ್ತು ಲಿಖಿತ ಕೌಶಲ್ಯಗಳನ್ನು ಹೆಚ್ಚಿಸಲು ಸಹಾಯ ಮಾಡುವುದು.
- ಮಕ್ಕಳಿಗೆ ಸ್ವತಃ ವಾಕ್ಯರಚನೆ ಮಾಡುವ ಕೌಶಲ್ಯ ಮತ್ತು ಬರವಣಿಗೆಯ ವಿವಿಧ ಪ್ರಕಾರಗಳ ಜ್ಞಾನವನ್ನು ಹೆಚ್ಚಿಸುವುದು.
- ಮಕ್ಕಳಲ್ಲಿ, ಬರೆಯುವ ಮೂಲಕ ಕಲಿತ ವಿಷಯಗಳನ್ನು ಅವರಿಗೆ ಅರ್ಥವಾದ ರೀತಿಯಲ್ಲಿ ಅಭಿವ್ಯಕ್ತಿಪಡಿಸುವ ಕೌಶಲ್ಯಗಳನ್ನು ಹೆಚ್ಚಿಸುವುದು.
- ಮಕ್ಕಳಿಗೆ ವಿವಿಧ ಪ್ರಕಾರಗಳ ಸೃಜನಶೀಲ ಬರವಣಿಗೆಗಳ (ವೈಯಕ್ತಿಕ ಪ್ರಬಂಧಗಳು, ಕಾವ್ಯ, ಕವನ, ನಾಟಕರೂಪ, ಭಾಷಣದ ರೂಪ, ನೆನಪಿನ ಬರವಣಿಗೆ, ಚಿತ್ರಣಗಳ ಮೂಲಕ ಕ್ರಿಯಾತ್ಮಕ ಬರವಣಿಗೆ (story board drawing), ಪೋಸ್ಟರ್‌ಗಳು) ಪರಿಚಯ ಮಾಡಿಸುವುದು
- ಪ್ರತಿಯೊಂದು ಜಿಲ್ಲೆಯಲ್ಲಿನ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಮಕ್ಕಳು ಬರೆದ **ಉತ್ತಮವಾದ** ಪತ್ರಗಳನ್ನು/ಲೇಖನಗಳನ್ನು/ಬರವಣಿಗೆಗಳನ್ನು ಕ್ರೂಢೀಕರಿಸಿ ಪುಸ್ತಕ ರೂಪದಲ್ಲಿ ಬೈಂಡಿಂಗ್ ಮಾಡಿಸಿ ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಿಗೆ ಇತರ ಮಕ್ಕಳನ್ನು ಪ್ರೇರೆಪಿಸಲು ನೀಡುವುದು.

ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸಿ ಅಭಿಯಾನ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು.

- ಗ್ರಂಥಾಲಯದ ಮೇಲ್ವಿಚಾರಕರು ಮಕ್ಕಳ ಬರವಣಿಗೆಗೆ ಪ್ರತಿಕ್ರಿಯಿಸಿ, ಮಕ್ಕಳು ಬರವಣಿಗೆಯಲ್ಲಿ ವ್ಯಕ್ತಪಡಿಸುವ ವಿಚಾರಗಳಿಗೆ ಪ್ರತಿಕ್ರಿಯಿಸುವುದು.
- ಗ್ರಾಮ ಪಂಚಾಯಿತಿಯಿಂದ **'ಅಮ್ಮನಿಗಾಗಿ ಒಂದು ಪುಸ್ತಕ ಅಭಿಯಾನ'** ಮತ್ತು **'ಪತ್ರ ಬರೆಯುವ ಅಭಿಯಾನ'** ಗಳಲ್ಲಿ ಮಕ್ಕಳಿಗೆ ಬರೆಯಲು ಅವಶ್ಯಕತೆ ಇರುವ ಎಲ್ಲಾ ಸಾಮಗ್ರಿಗಳನ್ನು ಒದಗಿಸಿ ಪೆನ್ಸಿಲ್‌ಗಳು, ಪೆನ್ನುಗಳು ಮತ್ತು ಕ್ರೆಯೋನ್ಸ್‌ಗಳನ್ನು ಒಳಗೊಂಡಂತೆ ಪುಸ್ತಕಗಳು (ಗೆರೆಇಲ್ಲದ ಮತ್ತು ಸಾಲಿನ) ಹಾಗೂ ಬರೆಯಲು ವಿಷಯವನ್ನು ಒದಗಿಸುವುದು.
- ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲಾ ಶಿಕ್ಷಕರಿಂದ/ಎನ್‌ಜಿಒ ಸಂಸ್ಥೆಗಳಿಂದ ವಿವಿಧ ಪ್ರಕಾರಗಳ ಸೃಜನಶೀಲ ಬರವಣಿಗೆಗಳ ಕುರಿತು ಗ್ರಾಮೀಣ ಮಕ್ಕಳಿಗೆ ಪರಿಚಯ ಪಡಿಸುವುದು
- **'ಅಮ್ಮನಿಗಾಗಿ ಒಂದು ಪುಸ್ತಕ'** ಮತ್ತು **'ಪತ್ರ ಬರೆಯುವ ಅಭಿಯಾನ'** ಅಭಿಯಾನದ ಪ್ರಯುಕ್ತ ಪ್ರತಿ ವಾರವು ಮಕ್ಕಳು ತಾವು ಬರೆದಂತಹ ಕೆಲಸವನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಂಥಾಲಯಗಳಿಗೆ ಒಪ್ಪಿಸುವುದು.

- ಈ ಅಭಿಯಾನದ ಚಟುವಟಿಕೆಯನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯದ ಆವರಣದಲ್ಲಿ ಆಯೋಜಿಸುವುದು.
- ಗ್ರಾಮ ಪಂಚಾಯಿತಿಗಳಲ್ಲಿ 'ಪತ್ರ ಬರೆಯುವ ಅಭಿಯಾನ' ಮತ್ತು 'ಅಮ್ಮನಿಗಾಗಿ ಒಂದು ಪುಸ್ತಕ' ಮುಖಾಂತರ ಗ್ರಾಮ ಪಂಚಾಯಿತಿಗಳಲ್ಲಿ ಬರೆಯುವಂತಹ ಹಾಗೆಯೇ ಓದುವಂತಹ ಆಸಕ್ತಿ ಇರುವ ಮಕ್ಕಳನ್ನು ಪ್ರೋತ್ಸಾಹಿಸುವುದು.
- ಪತ್ರ ಬರೆಯುವ ಅಭಿಯಾನ' ಮತ್ತು 'ಅಮ್ಮನಿಗಾಗಿ ಒಂದು ಪುಸ್ತಕ' ಚಟುವಟಿಕೆಗಳಲ್ಲಿ ಉತ್ತಮವಾಗಿ ಬರೆದಂತಹ ಮಕ್ಕಳಿಗೆ ಪ್ರೋತ್ಸಾಹಿಸಲು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಥವಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಸಹಿ ಮಾಡಿದ ಪ್ರಶಂಸನಾ ಪತ್ರವನ್ನು ವಿತರಿಸುವುದು.

ಈಗಾಗಲೇ ರಾಜ್ಯದಲ್ಲಿ 22 ಲಕ್ಷಕ್ಕಿಂತ ಹೆಚ್ಚು ಮಕ್ಕಳು ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ನೋಂದಾಯಿತರಾಗಿರುತ್ತಾರೆ. ಮಕ್ಕಳಿಗೆ ವಿವಿಧ ಚಟುವಟಿಕೆಗಳನ್ನು ಆಯೋಜಿಸುವುದರ ಮೂಲಕ ಇನ್ನು ಹೆಚ್ಚಿನದಾಗಿ ಮಕ್ಕಳನ್ನು ಗ್ರಂಥಾಲಯಕ್ಕೆ ಉಚಿತವಾಗಿ ನೋಂದಾಯಿಸುವ ಗುರಿಯನ್ನು ಎಲ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಸಾಕಾರಗೊಳ್ಳುವಂತೆ ಕ್ರಮಕೈಗೊಳ್ಳುವುದು.

**'ಅಮ್ಮನಿಗಾಗಿ ಒಂದು ಪುಸ್ತಕ ಅಭಿಯಾನ'** ಮತ್ತು **'ಪತ್ರ ಬರೆಯುವ ಅಭಿಯಾನ'** ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಆಯೋಜಿಸಲು ತಗಲುವ ವೆಚ್ಚವನ್ನು ಗ್ರಾಮ ಪಂಚಾಯಿತಿಗಳಿಂದ ಸಂಗ್ರಹಿಸಲಾಗುವ ಗ್ರಂಥಾಲಯ ಕರ ಮತ್ತು ಗ್ರಾಮ ಪಂಚಾಯಿತಿಯ ಸ್ವಂತ ನಿಧಿಯಿಂದ ಭರಿಸುವುದು.

22-09-22

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು,(ಆಯಾ ತಾಲ್ಲೂಕು ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಈ ಸುತ್ತೋಲೆ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.)
3. ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು(ಆಯಾಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಂಥಾಲಯಗಳಿಗೆ ಈ ಸುತ್ತೋಲೆಯ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.)
4. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ರವರಿಗೆ ಸೂಕ್ತ ಬೆಂಬಲ ಮತ್ತು ಸಹಕಾರ ನೀಡಲು ಕ್ರಮವಹಿಸುವುದು.
5. ಮಾಹಿತಿ ಕೇಂದ್ರ/ವೆಬ್‌ಸೈಟ್, ಗ್ರಾಅಪ ಇಲಾಖೆ.

**ಪ್ರತಿಯನ್ನು:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.-560 001
3) ಆಯುಕ್ತರು, ಇವರ ಆಪ್ತ ಸಹಾಯಕರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
4) ಕಛೇರಿ ಪ್ರತಿ.